ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/21-22/** 17329-32 **ದಿನಾಂಕ:** 06 JAN 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಹಾಸನ.

ಮಾನ್ಯರೇ,

**ವಿಷಯ:** 66 ಕೆವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಎರಡನೇ ಸರ್ಕ್ಯೂಟ್ ವಿದ್ಯುತ್ ಮಾರ್ಗ ರಚನೆ ಕಾಮಗಾರಿಗೆ ಮಾರ್ಗ ಮುಕ್ತತೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಹಾಸನ ರವರ ಪತ್ರ ಸಂಖ್ಯೆ: 3124-28 ದಿನಾಂಕ: 31.12.2021
2. ನಿರ್ದೇಶಕರು(ತಾಂ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 05.01.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದ್ವಿ-ವಿದ್ಯುತ್ ಮಾರ್ಗದ ಗೋಪುರಗಳ ಮೇಲೆ ಹಾಲಿ ಇರುವ 66 ಕೆವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಎರಡನೇ ಸರ್ಕ್ಯೂಟ್ ವಿದ್ಯುತ್ ಮಾರ್ಗ ರಚನೆ ಕಾಮಗಾರಿಯಲ್ಲಿ ಒಟ್ಟು 18.6 ಕಿ.ಮೀ ವಿದ್ಯುತ್ ಮಾರ್ಗವಿದ್ದು ಅದರಲ್ಲಿ 9.611 ಕಿ.ಮೀ ಎರಡನೇ ಸರ್ಕ್ಯೂಟ್ ವಿದ್ಯುತ್ ವಾಹಕ ಅಳವಡಿಕೆ ಕಾಮಗಾರಿ ಮುಕ್ತಾಯಗೊಂಡಿರುತ್ತದೆ. ಬಾಕಿ ಉಳಿದಿರುವ 8.9 ಕಿ.ಮೀ ವಿದ್ಯುತ್ ವಾಹಕ ಅಳವಡಿಕೆ ಕಾಮಗಾರಿಯನ್ನು ದಿನಾಂಕ: 02.01.2022 ರಿಂದ 23.01.2022 ರ ಅವಧಿಯಲ್ಲಿ 10 ದಿನಗಳ ಕಾಲ ಬೆಳಗ್ಗೆ:9:00 ರಿಂದ ಸಂಜೆ:6:00 ಗಂಟೆಯ ವರೆಗೆ ಮಾಡಲು ನಿಗದಿಪಡಿಸಿರುವ ಹಿನ್ನಲೆಯಲ್ಲಿ ಸದರಿ ದಿನಾಂಕಗಳಂದು ಸ್ಥಳೀಯವಾಗಿ ವಿದ್ಯುತ್ ಅಡಚಣೆಗೊಳಿಸಲು ಯಾವುದಾದರು ಸಮಸ್ಯೆ ಇದ್ದಲ್ಲಿ ಬದಲಿ ದಿನಾಂಕವನ್ನು ತಿಳಿಸುವುದಾಗಿ ಕವಿಪ್ರನಿನಿಯಿಂದ ತಿಳಿಸಿದ್ದು, ಮಾರ್ಗಮುಕ್ತತೆ ನೀಡುವಂತೆ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಹಾಸನ ರವರು ಕೋರಿರುತ್ತಾರೆಂದು ತಿಳಿಸಿರುತ್ತೀರಿ.

ಮುಂದುವರೆದು, ದಿನಾಂಕ: 02.01.2022 ರಿಂದ 23.01.2022 ರವರೆಗೆ 66 ಕೆವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಮುಕ್ತತೆಗೆ ಸಹಮತ ನೀಡಬಹುದೆಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಕಲೇಶಪುರ ಮತ್ತು ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಚಾವಿಸನಿನಿ, ಹಾಸನ ರವರು ತಿಳಿಸಿರುತ್ತಾರೆಂದು ಮತ್ತು ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ, ನಿರ್ವಹಣೆಯನ್ನು ಕೈಗೊಳ್ಳುವ ಸಮಯದಲ್ಲಿ ಕೋವಿಡ್ ಆಸ್ಪತ್ರೆ ಮತ್ತು ಆಕ್ಸಿಜನ್ ಪ್ಲಾಂಟ್‌ಗಳಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗುವುದೆಂದು ತಿಳಿಸಿ ತಾವು ಸಹ ಮಾರ್ಗಮುಕ್ತತೆಗೆ ಸಹಮತ ನೀಡಿರುತ್ತೀರಿ.

ಆದ್ದರಿಂದ 66 ಕೆವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಎರಡನೇ ಸರ್ಕ್ಯೂಟ್ ವಿದ್ಯುತ್ ಮಾರ್ಗ ರಚನೆ ಕಾಮಗಾರಿಗಳನ್ನು ಕೈಗೊಳ್ಳಲು **ದಿನಾಂಕ: 07.01.2022 ರಿಂದ 23.01.2022 ಗಳಲ್ಲಿ ವಾರದಲ್ಲಿ ಎರಡು ದಿನ ಮಾತ್ರ ಬೆಳಗ್ಗೆ 10.00 ರಿಂದ 16:00 ಗಂಟೆಯವರೆಗೆ ಮಾರ್ಗಮುಕ್ತತೆ** ನೀಡಲು ನಿರ್ದೇಶಕರು(ತಾಂತ್ರಿಕ) ರವರು ಉಲ್ಲೇಖ(2) ರಲ್ಲಿ ಅನುಮೋದಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ರವರು **ಗ್ರಾಹಕರುಗಳಿಗೆ /ಕಾಫಿ ಬೆಳೆಗಾರಿಗೆ** ವಿದ್ಯುತ್ ವ್ಯತ್ಯಯದ ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸುವುದು, ಕೋವಿಡ್ ಆಸ್ಪತ್ರೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಒದಗಿಸುವುದು ಮತ್ತು ಸದರಿ ದಿನಾಂಕಗಳಂದು ವ್ಯಾಪ್ತಿಯ ಎಲ್ಲಾ 11ಕೆವಿ ಮಾರ್ಗಗಳ/ಪರಿವರ್ತಕಗಳ ನಿರ್ವಹಣೆಯನ್ನು ಕೈಗೊಳ್ಳುವುದು ಹಾಗೂ ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

**ಸೂಚನೆ: ಮೇಲೆ ತಿಳಿಸಿರುವ ಮಾರ್ಗಮುಕ್ತತೆಯ ದಿನಾಂಕಗಳಂದು ಯಾವುದೇ ಸರ್ಕಾರಿ ಕಾರ್ಯಕ್ರಮಗಳು/ಪರೀಕ್ಷೆಗಳಿದ್ದಲ್ಲಿ ಸದರಿ ದಿನಾಂಕದಂದು ಮಾರ್ಗಮುಕ್ತತೆಯು ರದ್ದಾಗುವುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.**

ತಮ್ಮ ವಿಶ್ವಾಸಿ,

5.1.2022

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಪ್ರಸರಣಾ ವಲಯ, ಕವಿಪ್ರನಿನಿ, ಹಾಸನ ರವರ ಮಾಹಿತಿಗಾಗಿ.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಹಾಸನ.
3. ಕಾರ್ಯನಿವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ, ಸಕಲೇಶಪುರ.
4. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು, ನಿರ್ದೇಶಕರು (ತಾಂತ್ರಿಕ), ಚಾವಿಸನಿನಿ ರವರ ಗಮನಕ್ಕೆ.

ಕಛೇರಿ ಪ್ರತಿ/ಮುಖ್ಯ ಕಡತ.